# ಶಾಂತಿಯ ಹರಿಕಾರ
# ಪ್ರವಾದಿ ಮುಹಮ್ಮದ್ (ಸ.ಅ.)


## ಲೇಖಕರು: ಮೌಲಾನಾ ವಹೀದುದ್ದೀನ್ ಖಾನ್
(ಪದ್ಮವಿಭೂಷಣ ಪ್ರಶಸ್ತಿ ಪುರಸ್ಕೃತರು ಹಾಗೂ ಗಾಂಧಿವಾದಿಗಳು)

## ಮುನ್ನುಡಿ

ತಮ್ಮನ್ನು ತಾವು 'ಮುಸ್ಲಿಮರು' ಎಂದು ಕರೆದುಕೊಳ್ಳುವ ಜನರ ಸಣ್ಣ ಗುಂಪುಗಳು ಹೊಂದಿರುವ ಅಸಹಿಷ್ಣುತೆ ಮತ್ತು ಆ ಗುಂಪುಗಳ ಹಿಂಸಾತ್ಮಕ ಉಗ್ರವಾದದ ಕಾರಣದಿಂದಾಗಿ, ಪ್ರಸ್ತುತ ಇಸ್ಲಾಂ ಅನ್ನು ವ್ಯಾಪಕವಾಗಿ ಹಿಂಸಾಚಾರದ ಧರ್ಮವೆಂದು ತಪ್ಪಾಗಿ ಗ್ರಹಿಸಲಾಗುತ್ತಿದೆ. ತಮ್ಮ ಉದ್ದೇಶಗಳಲ್ಲಿ ಯಶಸ್ಸನ್ನು ಸಾಧಿಸಬೇಕಾದರೆ ಹಿಂಸೆ, ಭಯೋತ್ಪಾದನೆಗಳಂತಹ ಮಾರ್ಗಗಳ ಮೂಲಕ ಮಾತ್ರ ಸಾಧ್ಯ ಎಂಬುದು ಇಂತಹ ಗುಂಪುಗಳಿಗೆ ಸೇರಿದ ಜನರ ಪ್ರತಿಪಾದನೆಯಾಗಿದೆ. ಆದರೆ, ಇವರ ಈ ಪ್ರತಿಪಾದನೆ ಸತ್ಯಕ್ಕೆ ದೂರವಾದುದು.

ಇಸ್ಲಾಂ ಎನ್ನುವುದು, ತಮ್ಮನ್ನು ತಾವು 'ಮುಸ್ಲಿಮರು' ಎಂದು ಕರೆದುಕೊಳ್ಳುವ ನಿರ್ದಿಷ್ಟ ಗುಂಪಿನ ಜನರ ನಡವಳಿಕೆ ಅಥವಾ ಅವರ ಕ್ರಿಯೆಗಳಿಗೆ ನೀಡಿದ ಹೆಸರಲ್ಲ. ಇಸ್ಲಾಂ ಧರ್ಮವು; ನಂಬಿಕೆ, ವಿಶ್ವಾಸ ಮತ್ತು ನ್ಯಾಯ–ನೀತಿಗಳನ್ನು ಹೊಂದಿರುವ ಒಂದು ಸುವ್ಯವಸ್ಥೆಯ ಹೆಸರಾಗಿದೆ ಮತ್ತದು ಆದರ್ಶಗಳ ಜೊತೆ ಜೋಡಿಸಲ್ಪಟ್ಟ ಧರ್ಮವಾಗಿದೆ. ಇನ್ನು, ಯಾರು ಆ ನಂಬಿಕೆಗಳ ಮೇಲೆ ವಿಶ್ವಾಸವನ್ನಿಟ್ಟು; ಇಸ್ಲಾಮಿನ ನೀತಿಗಳನ್ನು, ಅದರ ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುತ್ತಾರೋ, ಅವರನ್ನು 'ಮುಸ್ಲಿಮರು' ಎಂದು ಕರೆಯಲಾಗುತ್ತದೆ.

ಮುಸ್ಲಿಮರ ನಡವಳಿಕೆಯನ್ನು ಇಸ್ಲಾಮಿನ ತತ್ವಗಳ, ಅದರ ಆದರ್ಶಗಳ ಆಧಾರದ ಮೇಲೆ ನಿರ್ಣಯಿಸಬೇಕೇ ಹೊರತು ಅದಕ್ಕೆ ತದ್ವಿರುದ್ಧವಾಗಿ ಅಲ್ಲ ಎನ್ನುವುದು ನಮಗೆ ಸ್ಪಷ್ಟವಾಗಿರಬೇಕು. ಮುಸ್ಲಿಮರ ಕ್ರಿಯೆಗಳ ಆಧಾರದ ಮೇಲೆ ಇಸ್ಲಾಂ ಧರ್ಮವನ್ನು ಅಳೆಯುವುದು ಎಷ್ಟುಮಾತ್ರಕ್ಕೂ ಸರಿಯಾದ ಕ್ರಮವಲ್ಲ.

ತಮ್ಮನ್ನು ತಾವು 'ಮುಸ್ಲಿಮರು' ಎಂದು ಕರೆದುಕೊಳ್ಳುವ ಕೆಲವು ವ್ಯಕ್ತಿಗಳು, ಭಯೋತ್ಪಾದನೆಯನ್ನು ಅಳವಡಿಸಿಕೊಂಡಲ್ಲಿ, ಅದಕ್ಕಾಗಿ ಆ ವ್ಯಕ್ತಿಗಳನ್ನು ದೂಷಿಸಬೇಕೇ ಹೊರತು; ಖಂಡಿತವಾಗಿಯೂ ಅವರು ಪ್ರತಿಪಾದಿಸುವ ಧರ್ಮವನ್ನಲ್ಲ. ಇದೆಲ್ಲವನ್ನೂ ನಾವು ಇಸ್ಲಾಮಿಗಾಗಿ ಮಾಡುತ್ತಿದ್ದೇವೆ ಎಂದು ಅವರು ಸಾವಿರ ಬಾರಿ ಕೂಗಿ ಕೂಗಿ ಹೇಳಿದರೂ, ಇಂತಹ ದುರ್ಜನರ ಕಾರ್ಯಚಟುವಟಿಕೆಗಳು ಯಾವುದೇ ಕಾರಣಕ್ಕೂ ಇಸ್ಲಾಮಿಕ್ ಎಂದು ಪರಿಗಣಿಸಲ್ಪಡುವುದಿಲ್ಲ (ಬದಲಿಗೆ, ಅವುಗಳೆಲ್ಲವೂ ಇಸ್ಲಾಮ್ ನೀಡುವ ಶಿಕ್ಷಣಕ್ಕೆ ತದ್ವಿರುದ್ಧವಾಗಿವೆ).

## ಇಸ್ಲಾಂನಲ್ಲಿ ಶಾಂತಿಯ ಪರಿಕಲ್ಪನೆ

ಇಸ್ಲಾಂ ಎಂಬ ಪದದ ಮೂಲ ಅರೆಬಿಕ್ ನ 'ಸಿಲ್ಮ್' ಎಂಬ ಪದದಿಂದ ಬಂದಿದೆ. ಈ

ಪದದ ಅರ್ಥವು ‘ಶಾಂತಿ’ ಎಂಬುದಾಗಿದೆ. ಇಸ್ಲಾಂನ ಎಲ್ಲಾ ಬೋಧನೆಗಳು ನೇರವಾಗಿ ಅಥವಾ ಪರೋಕ್ಷವಾಗಿ ಶಾಂತಿಯ ತತ್ವವನ್ನೇ ಸಾರುತ್ತವೆ.

‘ಇಸ್ಲಾಂನ ಉದ್ದೇಶವೇ ಶಾಂತಿಯಾಗಿದೆ, ‘ದೇವನು ಶಾಂತಿಯ ಪ್ರತಿರೂಪ’ ಎಂದು ಸಾರುವ ಪ್ರವಾದಿವಚನಗಳು ಅಲ್-ಬುಖಾರಿ ಎಂಬ ಹದೀಸ್ ಗ್ರಂಥದಲ್ಲಿ ದಾಖಲಿಸಲ್ಪಟ್ಟಿವೆ. ಇದರಂತೆಯೇ, ಮತ್ತೊಂದು ಹದೀಸ್ ಕೂಡ ಗ್ರಂಥಗಳಲ್ಲಿ ದಾಖಲಿಸಲ್ಪಟ್ಟಿದೆ. (‘ಹದೀಸ್’ ಎಂದರೆ ಪ್ರವಾದಿ ಮುಹಮ್ಮದರ ಬೋಧನೆಗಳು ಮತ್ತು ಅವರು ನೀಡಿದ ಶಿಕ್ಷಣಗಳು) “ಯಾರ ನಾಲಿಗೆ ಮತ್ತು ಕೈಗಳಿಂದ ಜನರು ಸುರಕ್ಷಿತವಾಗಿರುವರೋ, ಅವನೇ ನಿಜವಾದ ಅರ್ಥದಲ್ಲಿ ‘ಮುಸ್ಲಿಮ್’ (ಅಂತಹವನು ಮಾತ್ರ ನನ್ನ ಅನುಯಾಯಿ ಎಂದು ಕರೆಸಿಕೊಳ್ಳಲು ಅರ್ಹ) ಎಂದು ಆ ಹದೀಸಿನಲ್ಲಿ ಹೇಳಲಾಗಿದೆ.

ಕುರ್ ಆನಿನಲ್ಲಿ ವರ್ಣಿಸಲಾದ ದೇವನ ಗುಣವೈಶಿಷ್ಟ್ಯಗಳ ಪೈಕಿ ಒಂದು ವಿಶಿಷ್ಟ ಗುಣ ‘ಅಸ್ಸಲಾಮ್’ ಎಂಬುದಾಗಿದೆ. ಅದರರ್ಥ ‘ಶಾಂತಿ ಮತ್ತು ಭದ್ರತೆ’ ಎಂದಾಗಿದೆ. ದೇವನ ಅಸ್ತಿತ್ವವೇ ಶಾಂತಿಯ ಅಭಿವ್ಯಕ್ತಿ ಅಥವಾ ಶಾಂತಿಯ ಸಾಕಾರ ರೂಪವಾಗಿದೆ ಎಂಬುದು ಇದರ ತಾತ್ಪರ್ಯ. ಕುರ್ ಆನಿ ನಲ್ಲಿ, ದೈವಿಕ ಮಾರ್ಗದರ್ಶನವನ್ನು ‘ಶಾಂತಿಯ ಮಾರ್ಗ’ಕ್ಕೆ ಹೋಲಿಸಲಾಗಿದೆ (ಕುರಾನ್ 5:16).

ಇಸ್ಲಾಂ ಸೇರಿದಂತೆ ಜಗತ್ತಿನ ಇತರ ಹೆಚ್ಚಿನ ಧರ್ಮಗಳಲ್ಲಿ, ‘ಮನುಷ್ಯನ ಪಾಲಿಗೆ ಆದರ್ಶಪ್ರಾಯವಾದ ಶಾಶ್ವತತಾಣ ‘ಸ್ವರ್ಗ’ವಾಗಿದೆ. ಅದು ಪ್ರತಿಯೊಬ್ಬ ವ್ಯಕ್ತಿಯ ಅಂತಿಮ ಗುರಿ ಆಗಬೇಕು’ ಎಂಬ ಮಹತ್ತರ ಸಂದೇಶವನ್ನು ಸಾರಿವೆ. ಕುರ್ ಆನ್ ನಲ್ಲಿ ಇಂತಹ ಪರಿಪೂರ್ಣತೆ ಹೊಂದಿರುವ ಸ್ವರ್ಗವನ್ನು, ‘ಶಾಂತಿಯ ನಿವಾಸ’ (10: 25) ಎಂದು ಬಣ್ಣಿಸಲಾಗಿದೆ. “ಸ್ವರ್ಗದ ಜನರು, ಪರಸ್ಪರ ಶಾಂತಿಯ ಶುಭಹಾರೈಕೆಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ” ಎಂದೂ ಕುರ್ ಆನ್ ಉಲ್ಲೇಖಿಸಿದೆ. ಒಂದು ಸಮಾಜವು, ಮಾದರಿಯುತ ಸಮಾಜ ಎಂದು ಕರೆಸಿಕೊಳ್ಳಬೇಕಾದರೆ ಅದರಲ್ಲಿ ‘ಶಾಂತಿ’ ಗೆ ಎಷ್ಟುದೊಡ್ಡ ಮಹತ್ವವಿದೆ ಎಂಬುದರ ಸೂಚನೆ ಇದಾಗಿದೆ.

ಶಾಂತಿಯು ಇಸ್ಲಾಂನ ಪರಂಪರೆಯಾಗಿದೆ; ಯುದ್ಧವು ಈ ಪರಂಪರೆಗೆ ಅಪವಾದವಾಗಿದೆ. ಇಸ್ಲಾಮಿನ ಎಲ್ಲಾ ಬೋಧನೆಗಳು ಮತ್ತು ಇಸ್ಲಾಂನ ಪ್ರವಾದಿವರ್ಯರ ಜೀವನವು ಖುದ್ದು ಇದಕ್ಕೆ ಸಾಕ್ಷಿಯಾಗಿದೆ. “ದೇವನು ಕಠೋರತೆಗೆ ನೀಡದಿದ್ದುದನ್ನು ಮೃದುತ್ವಕ್ಕೆ ನೀಡುತ್ತಾನೆ” ಎಂದು ಹೇಳುವ ಪ್ರವಾದಿವಚನವಿದೆ; ಶಾಂತಿಯುತವಾದ ವಿಧಾನವು ಹಿಂಸಾಚಾರಕ್ಕಿಂತ ಹೆಚ್ಚು ಸ್ಪಷ್ಟ ಮತ್ತು ಶ್ರೇಷ್ಠವಾಗಿದೆ ಎಂಬುದು ಇದರ ತಾತ್ಪರ್ಯವಾಗಿದೆ.

## ಕುರ್ ಆನಿನಲ್ಲಿ ಶಾಂತಿ

ನಿಸ್ಸಂದೇಹವಾಗಿಯೂ ಕುರ್-ಆನ್ ಶಾಂತಿಯನ್ನು ಸಾರುವ ದೈವಿಕ ಗ್ರಂಥವಾಗಿದೆ. ಇದು ಯುದ್ಧ ಮತ್ತು ಹಿಂಸೆಯನ್ನು ಪ್ರಚೋದಿಸುವ ಗ್ರಂಥ ಅಲ್ಲವೇ ಅಲ್ಲ. ಕುರ್ ಆನ್ ನ ಎಲ್ಲಾ ಘೋಷಣೆಗಳು; ಅವು ನೇರವಾಗಿರಲಿ ಅಥವಾ ಪರೋಕ್ಷವಾಗಿ ಹೇಳಿದುದಿರಲಿ, ಅವೆಲ್ಲವೂ ಕೂಡ ಶಾಂತಿಗೆ ಸಂಬಂಧಿಸಿದುದೇ ಆಗಿವೆ ಎಂಬ ಅಂಶವನ್ನು ಕುರ್ ಆನ್ ಅಧ್ಯಯನದಿಂದ ನಮಗೆ ಮನಗಾಣಲು ಸಾಧ್ಯ.

ಕುರ್ ಆನ್ ನ ಮೊತ್ತಮೊದಲ ಅಧ್ಯಾಯದ ಮೊತ್ತ ಮೊದಲ ಸೂಕ್ತವು ಶಾಂತಿಗೆ ಸಂಬಂಧಿಸುದುದಾಗಿದೆ; 'ದೇವನ ನಾಮದಿಂದ, ಅವನು ಅತ್ಯಂತ ದಯಾಮಯನು, ಅತ್ಯಂತ ಕರುಣಾಳು ', ಈ ಸೂಕ್ತವನ್ನು ಕುರ್ ಆನಿನಲ್ಲಿ 114 ಬಾರಿ ಪುನರಾವರ್ತಿಸಲಾಗಿದೆ. ಈ ಗ್ರಂಥವನ್ನು ನಮಗೆ ಕಳುಹಿಸಿದ ಪರಮಾತ್ಮನ ಶ್ರೇಷ್ಠ ಗುಣಲಕ್ಷಣವು ಅವನ "ಕರುಣೆ" ಆಗಿದೆ ಎಂಬುದಕ್ಕೆ ಈ ಸೂಕ್ತವು ಸಾಕ್ಷಿಯಾಗಿದೆ. (ಕುರ್ ಆನಿನ ಅಧ್ಯಯನ ಮಾಡಿದಲ್ಲಿ) ಎಲ್ಲೆಡೆಯೂ ಸುತ್ತುವರಿದಿರುವ ಸೃಷ್ಟಿಕರ್ತನ ಅನುಕಂಪ ಅವನ ಕರುಣೆಗಳೇ ಈ ಗ್ರಂಥದಲ್ಲಿ ಪ್ರಸ್ತಾಪಿಸಿದ ಮುಖ್ಯವಿಷಯವಾಗಿದೆ ಎನ್ನಲಡ್ಡಿಯಿಲ್ಲ.

ಪರಿಣಾಮಗಳ ಮೂಲಕ ನಿರ್ಣಯಿಸುವುದಾದರೆ ಶಾಂತಿಯ ಮಾರ್ಗವು, ಘರ್ಷಣೆ ಅಥವಾ ಸಂಘರ್ಷಕ್ಕಿಂತ ಸಾವಿರ ಪಟ್ಟು ಹೆಚ್ಚು ಉತ್ತಮವಾಗಿದೆ. ಮಾನವಕುಲಕ್ಕಾಗಿ ದೇವನಿರ್ಮಿತ ಕಾನೂನಿನ ಅನುಸಾರ ಹೇಳುವುದಾದರೆ, 'ದೇವನು ಕೇವಲ ಸಾಮರಸ್ಯ ಅಥವಾ ಸಮನ್ವಯದ ಮೂಲಕ ಯಶಸ್ಸನ್ನು ದಯಪಾಲಿಸುತ್ತಾನೆಯೇ ಹೊರತು ಹಿಂಸಾತ್ಮಕ ಕ್ರಮಗಳ ಮೂಲಕ ಅಲ್ಲ' ಎಂಬುದು ಸ್ಪಷ್ಟ. ಪ್ರವಾದಿಯವರ ಪತ್ನಿ ಆಯಿಶಾ (ರ.ಅ.) ಹೇಳಿದರು: "ಪ್ರವಾದಿವರ್ಯರ ಮುಂದೆ ಎರಡು ಆಯ್ಕೆಗಳಿರುತ್ತಿದ್ದರೆ, ಅವರು ಯಾವಾಗಲೂ ಹೆಚ್ಚು ಸುಲಭವಾದ (ಘರ್ಷಣೆಯಿಲ್ಲದ) ಮಾರ್ಗವನ್ನೇ ಆರಿಸಿಕೊಳ್ಳುತ್ತಿದ್ದರು." (ಅಲ್-ಬುಖಾರಿ).

ಇದರರ್ಥ, ಆಕ್ರಮಣಶೀಲತೆಯನ್ನು ಆಕ್ರಮಣಶೀಲತೆಯ ಮೂಲಕ ಎದುರಿಸುವುದು ಹೆಚ್ಚು ಕಠಿಣವಾದ ಆಯ್ಕೆಯಾಗಿದೆ. ಅದರ ಬದಲಿಗೆ, ತಾಳ್ಮೆ ಮತ್ತು ಸಹನೆಯೊಂದಿಗೆ ಆಕ್ರಮಣಶೀಲತೆಯನ್ನು ಎದುರಿಸುವುದು ಹೆಚ್ಚು ಸುಲಭವಾದ ಆಯ್ಕೆಯಾಗಿದೆ. ಕ್ರಮೇಣವಾದ ಬದಲಾವಣೆಯು ಹಠಾತ್ ಕ್ರಾಂತಿಗಿಂತ ಹೆಚ್ಚು ಸುಲಭವಾದ್ದದಾಗಿದೆ. ಬಯಸಿದ ಫಲಿತಾಂಶಗಳನ್ನು ಪಡೆಯಬೇಕಾದರೆ, ಶಾಂತಿಯ ಮಾರ್ಗವು ಯಾವಾಗಲೂ ಹೆಚ್ಚು ಸುಲಭ ಹಾಗೂ ಸರಳವಾದ ಆಯ್ಕೆಯಾಗಿದೆ.

## ಶಾಂತಿಯ ಹರಿಕಾರ ಪ್ರವಾದಿ ಮುಹಮ್ಮದ್ (ಸ)

ಇಸ್ಲಾಂ ಎಂಬುದು, ದೇವನು ನಿಶ್ಚಯಿಸಿಕೊಟ್ಟ ಜೀವನಕ್ರಮ ಹಾಗೂ ಪ್ರವಾದಿ ಮುಹಮ್ಮದರು (ಆ ಜೀವನಕ್ರಮವನ್ನು) ಖುದ್ದು ತನ್ನ ಜೀವನದಲ್ಲಿ ಪಾಲಿಸಿ, ಪ್ರತಿಪಾದಿಸಿದ ಧರ್ಮದ ಹೆಸರಾಗಿದೆ. ಅದರ ಸ್ಪಷ್ಟ ಉದಾಹರಣೆಯೇ ಅವರ ಬದುಕಾಗಿದೆ; ಪ್ರವಾದಿ ಮುಹಮ್ಮದರು ಜೀವನಪರ್ಯಂತ ಶಾಂತಿಯ ಸಂದೇಶವನ್ನು ಸಾರಿದ ಪ್ರವಾದಿಯಾಗಿದ್ದರು. ಅವರು ಎಷ್ಟು ಮಾತ್ರಕ್ಕೂ ಹಿಂಸೆಯನ್ನು ಪ್ರಚೋದಿಸುವ ಪ್ರವಾದಿಯಾಗಿರಲಿಲ್ಲ. ಕುರ್ ಆನಿನಲ್ಲಿ ಅವರ ವ್ಯಕ್ತಿತ್ವವನ್ನು 'ಮನುಕುಲದ ಪಾಲಿನ ಕರುಣೆ' ಎಂದು ಬಣ್ಣಿಸಲಾಗಿದೆ.

ಸಂಪೂರ್ಣ ಅರ್ಥದಲ್ಲಿ ಶಾಂತಿಪ್ರಿಯ ವ್ಯಕ್ತಿತ್ವ ಅವರದ್ದಾಗಿತ್ತು. ಅವರ ಶಾಂತಿಪ್ರಿಯ ಸ್ವಭಾವವು ಎಷ್ಟು ಉನ್ನತವಾದದ್ದಾಗಿತ್ತು ಎಂದರೆ; ಅವರ ಸಹಚರರ ಪೈಕಿ ಒಬ್ಬರು ತನ್ನ ಮಗನ ಹೆಸರನ್ನು ಅಜ್ಞಾನದ ಕಾಲದಲ್ಲಿ 'ಹರಬ್' ('ಹರಬ್' ಪದದ ಅರ್ಥ ಯುದ್ಧ ಎಂದಾಗಿದೆ) ಎಂದು ಇಟ್ಟಿದ್ದರು. ಆ ಪದವನ್ನು ಕೇಳಲೂ ಅವರು ಇಷ್ಟಪಡಲಿಲ್ಲ . ತಕ್ಷಣ, ಅದನ್ನು 'ಹಸನ್' (ಉತ್ತಮನಾದವ) ಎಂದು ಬದಲಾಯಿಸಲು ಪೋಷಕರಿಗೆ ಮಾರ್ಗದರ್ಶನ ನೀಡಿದರು.

ಪ್ರವಾದಿವರ್ಯರ ಜೀವನದಲ್ಲಿ ನಡೆದ ಇನ್ನೊಂದು ಘಟನೆಯೂ ಸ್ವಾರಸ್ಯಕರವಾಗಿದೆ. ಶಾಂತಿಯ ಸಂದೇಶ ಸಾರುವ ಪ್ರವಾದಿಯವರ ವ್ಯಕ್ತಿತ್ವದ ಪರಿಚಯ ಮಾಡಿಸಲು ಇದು ಹೆಚ್ಚು ಸೂಕ್ತವೂ ಆಗಿದೆ. ಝೈದ್ ನಜ್ದ್ ಪ್ರದೇಶದ ಒಬ್ಬ ಕವಿಯಾಗಿದ್ದರು. ಪ್ರವಾದಿವರ್ಯರಿಗಿಂತ ಮುಂಚೆಯೇ ಅವರು ಜನಿಸಿದ್ದರು. ಖಡ್ಗ ವಿದ್ಯೆ ಹಾಗೂ ಕುದುರೆ ಸವಾರಿಯಲ್ಲಿ ಅವರು ಬಹಳ ನಿಷ್ಣಾತರಾಗಿದ್ದ ಕಾರಣ; ಅವರನ್ನು ಜನರು "ಝೈದ್-ಅಲ್-ಖೈಲ್" ಎಂದು ಕರೆಯುತ್ತಿದ್ದರು. 'ಖೈಲ್' ಎಂದರೆ ಕುದುರೆ. ಆಗಿನ ಕಾಲದಲ್ಲಿ ಕುದುರೆ ಮತ್ತು ಯುದ್ಧಕ್ಕೆ ಅವಿನಾಭಾವ ಸಂಬಂಧವಿತ್ತು. ಝೈದ್ ರವರು ಪ್ರವಾದಿವರ್ಯರ ಅನುಯಾಯಿಯಾದಾಗ ಪ್ರವಾದಿವರ್ಯರು ಮಾಡಿದ ಮೊತ್ತಮೊದಲ ಕಾರ್ಯ ಅವರ ಹೆಸರನ್ನು 'ಝೈದ್-ಅಲ್-ಖೈಲ್' ನ ಬದಲಾಗಿ 'ಝೈದ್-ಅಲ್-ಖೈರ್' ಎಂದು ಬದಲಾಯಿಸಿದ್ದು. 'ಖೈಲ್' ಅರಬ್ಬರ ಸಂಸ್ಕೃತಿಯಲ್ಲಿ ಯುದ್ಧ ಮತ್ತು ಹಿಂಸೆಗೆ ಸಾಂಕೇತಿಕವಾಗಿ ಬಳಸುವ ಪದವಾದ್ದರಿಂದ ಪ್ರವಾದಿವರ್ಯರು ಆ ಪದವನ್ನು ಕೇಳಲೂ ಇಷ್ಟಪಡಲಿಲ್ಲ. ಹಾಗಾಗಿಯೇ ಅವರು ಅದನ್ನು 'ಖೈರ್' ಎಂದರೆ 'ಒಳಿತು' ಎಂಬುದಾಗಿ ಬದಲಾಯಿಸಿದರು.

ಪ್ರವಾದಿವರ್ಯರು, ಜನರ ನಡುವೆ ಶಾಂತ ಸ್ವಭಾವದ ಸಂಸ್ಕೃತಿಯನ್ನು ಉಳಿಸಿ, ಬೆಳೆಸಲು ಶ್ರಮಿಸಿದರು. ಅವರು, ತನ್ನ ಅನುಯಾಯಿಗಳಿಂದ ಜನರಿಗೆ ಸದಾ

ಒಳಿತಾಗಬೇಕೆಂದು ಬಯಸುತ್ತಿದ್ದರು. ಪ್ರವಾದಿವರ್ಯರು, ತನ್ನ ಅನುಯಾಯಿಗಳ ಮೂಲಕ ಜನರಿಗೆ ಶಾಂತಿ ಮತ್ತು ಸಮೃದ್ಧಿಯ ಸಂದೇಶಗಳನ್ನು ತಲುಪಿಸಲು ಬಯಸುತ್ತಿದ್ದರೆ ವಿನಃ ಸಾವು ಮತ್ತು ವಿನಾಶದ ಸಂದೇಶವನ್ನಲ್ಲ ಎಂಬುದು ಅವರ ಜೀವನದ ಅಧ್ಯಯನದಿಂದ ನಮಗೆ ಮನಗಾಣಲು ಸಾಧ್ಯ. ಪ್ರವಾದಿವರ್ಯರ ಜೀವನದ ಮಂತ್ರವೇ ಶಾಂತಿ, ಶಾಂತಿ ಮತ್ತು ಕೇವಲ ಶಾಂತಿಯಾಗಿತ್ತು.

## ಪ್ರವಾದಿವರ್ಯರ ರಕ್ಷಣಾತ್ಮಕ ಹೆಜ್ಜೆಗಳ ಒಳನೋಟ

ಪ್ರವಾದಿವರ್ಯರ ಜೀವನದಲ್ಲಿ ನಡೆದ ಯುದ್ಧಗಳು ಕೇವಲ ಪ್ರಾಸಂಗಿಕ ಮತ್ತು ಅನಿವಾರ್ಯ ಸಂದರ್ಭಗಳಲ್ಲಿ ಅನ್ಯ ದಾರಿಗಾಣದೆ ಅವರು ತೆಗೆದುಕೊಂಡ ರಕ್ಷಣಾತ್ಮಕ ಹೆಜ್ಜೆಯಾಗಿತ್ತೇ ವಿನಃ, ಅದು ಅವರು ಸಾರಿದ ಮುಖ್ಯ ಸಂದೇಶವೋ ಅಥವಾ ಅವರ ವ್ಯಕ್ತಿತ್ವದ ಮುಖ್ಯ ಸಾರಾಂಶವೋ ಖಂಡಿತ ಆಗಿರಲಿಲ್ಲ. ವಾಸ್ತವ ಹೀಗಿದ್ದರೂ, ಪ್ರವಾದಿಯ ಅನೇಕ ಜೀವನಚರಿತ್ರಾಕಾರರು ಅವರ ಬಗ್ಗೆ ಸಂಪೂರ್ಣ ವಿಭಿನ್ನವಾದ ಚಿತ್ರಣವನ್ನು ಜನರ ಮುಂದಿಟ್ಟಿದ್ದಾರೆ. ಅವರ ಕುರಿತು, 'ಶಾಂತಿಯನ್ನು ಸಾರಿದ ಪ್ರವಾದಿ ಎಂಬ ವಾಸ್ತವವನ್ನು ಓದುಗರಿಗೆ ತಿಳಿಸುವ ಬದಲು, 'ಹಿಂಸೆಯನ್ನು ಪ್ರಚೋದಿಸಿದ ಪ್ರವಾದಿ' ಎಂಬಂತೆ ಬಿಂಬಿಸಿದ್ದಾರೆ.

ಪ್ರವಾದಿವರ್ಯರ ಕಾಲದಲ್ಲಿ ನಡೆದ ಯುದ್ಧಗಳು ಅರಬ್ ಬುಡಕಟ್ಟು ಜನಾಂಗದವರಲ್ಲಿ ಚಾಲ್ತಿಯಲ್ಲಿದ್ದ ಸಂಸ್ಕೃತಿಗೆ ಸಂಬಂಧಿಸಿದ್ದಾಗಿವೆ. ಪ್ರವಾದಿವರ್ಯರು ಜನಿಸುವುದಕ್ಕಿಂತ ಮೊದಲೇ ಮದೀನಾದ ಎರಡು ಪ್ರಮುಖ ಗೋತ್ರಗಳ ನಡುವೆ ನಿರಂತರ ಸಂಘರ್ಷದ ವಾತಾವರಣವಿತ್ತು. ಈ ಸಂಘರ್ಷವು ಯುದ್ಧದ ರೂಪ ಪಡೆದು, ಸರಿಸುಮಾರು 120 ವರ್ಷಗಳಷ್ಟು ದೀರ್ಘಕಾಲ ಮುಂದುವರಿಯಿತು ಹಾಗೂ ಆ ಯುದ್ಧಗಳಲ್ಲಿ ಸಾವಿರಾರು ಜನರು ಸಾವಿಗೂ ಈಡಾದರು ಎಂದು ಹೇಳಲಾಗುತ್ತದೆ. ಅವುಗಳ ಪೈಕಿ "ಬುವಾತ್ ಕದನ' ಹೆಚ್ಚು ಕುಪ್ರಸಿದ್ಧವಾದುದಾಗಿದೆ. (ಇಬ್ನೆ ಇಸ್ಹಾಕ್; ಪ್ರವಾದಿ ಚರಿತ್ರೆಯ ಪುಸ್ತಕದಿಂದ)

ಅರೇಬಿಯಾವನ್ನು ವಿವಿಧ ಜನಾಂಗಗಳಿಂದ ವಿಂಗಡಿಸಲ್ಪಟ್ಟ ಕಾಲದಲ್ಲಿ ಪ್ರವಾದಿ ಮುಹಮ್ಮದ್ ಅವರ ಜನನವಾಯಿತು. ಪ್ರತಿಯೊಂದು ಜನಾಂಗವೂ ತನ್ನದೇ ಆದ ಹಲವಾರು ಗೋತ್ರಗಳನ್ನು ಹೊಂದಿತ್ತು. ಆದುದರಿಂದ, ಪ್ರತಿಯೊಂದು ಗೋತ್ರವೂ ತನ್ನ ಪ್ರಾಬಲ್ಯಕ್ಕಾಗಿ ಹಾತೊರೆಯುತ್ತಿತ್ತು. ಈ ಕಾರಣದಿಂದಲೇ, ಜನಾಂಗಗಳ ಮತ್ತು ಗೋತ್ರಗಳ ನಡುವೆ ಕ್ಷುಲ್ಲಕ ವಿಷಯಗಳಿಗೆ ಸಟ್ಟಪುಟ್ಟ ಕಲಹಗಳು ನಡೆಯುವುದು ಸರ್ವೇ ಸಾಮಾನ್ಯ ವಿಷಯ ಎಂಬಂತಾಗಿತ್ತು. ಹಿಂದಿನಿಂದಲೂ ನಡೆದು ಬಂದ ಈ ಕೆಟ್ಟ ಸಂಸ್ಕೃತಿಯಿಂದಾಗಿ, ಪ್ರವಾದಿರ್ಯರ ಅನುಯಾಯಿಗಳು ಮತ್ತು ಅವರ ವಿರೋಧಿಗಳ

ನಡುವೆಯೂ ಆಗಾಗ್ಗೆ ಸಣ್ಣ ಮಟ್ಟದ ಚಕಮಕಿಗಳು ನಡೆಯುತ್ತಿದ್ದವು. ಪ್ರವಾದಿವರ್ಯರ ಜೀವನಚರಿತ್ರೆಕಾರರು ಯುದ್ಧಗಳೆಂದು ಪ್ರಸ್ತುತಪಡಿಸಿದ ಹೆಚ್ಚಿನ ಘಟನೆಗಳನ್ನು ಸಣ್ಣ ಸಣ್ಣ ಒಳಜಗಳಗಳೆಂದು ಅಥವಾ ಹೊಡೆದಾಟಗಳೆಂದು ವರ್ಗೀಕರಿಸುವುದು ವಾಸ್ತವಕ್ಕೆ ಹೆಚ್ಚು ಹತ್ತಿರವಾದೀತು.

ಪ್ರವಾದಿವರ್ಯರು, ಶಾಂತಿಯುತ ವಿಧಾನದಲ್ಲಿ ಮಾನವಕುಲಕ್ಕೆ ದೇವನ ಮಾರ್ಗದರ್ಶನವನ್ನು ತಿಳಿಸುವ ಕಾರ್ಯವನ್ನು ಆರಂಭಿಸತೊಡಗಿದರು.

ಮಕ್ಕಾದಲ್ಲಿ ಪ್ರವಾದಿಯಾಗಿ ಕಳೆದ ತನ್ನ ಜೀವನದ ಹದಿಮೂರು ವರ್ಷಗಳ ಅವಧಿಯಲ್ಲಿ; ತನ್ನ ಬೋಧನೆಗಳನ್ನು ವಿರೋಧಿಸಿದ ಅಥವಾ ತನ್ನ ಮತ್ತು ತನ್ನ ಅನುಯಾಯಿಗಳ ಮೇಲೆ ದಬ್ಬಾಳಿಕೆ ನಡೆಸಿದವರ ವಿರುದ್ಧ ಪ್ರವಾದಿವರ್ಯರ ಕಡೆಯಿಂದ ಯಾವುದೇ ರೀತಿಯ ಹಿಂಸಾಚಾರವಾಗಲೀ, ಯಾವುದೇ ರೀತಿಯ ಪ್ರತೀಕಾರವಾಗಲಿ ನಡೆದಿಲ್ಲ. ಪ್ರವಾದಿವರ್ಯರ ಜೀವನದ ಮಕ್ಕಾದ ಕಾಲಘಟ್ಟದಲ್ಲಿ; ಅವರು ತಮ್ಮ ಅನುಯಾಯಿಗಳಿಗೆ ತಾಳ್ಮೆ, ಸಹಿಷ್ಣುತೆ ಬೋಧಿಸುವುದರೊಂದಿಗೆ ತಮ್ಮ ವೈರಿಗಳಿಂದ ಸದಾ ದೂರವಿರುವಂತೆ ಹೇಳುತ್ತಿದ್ದರೆ ವಿನಹ ಅವರೊಂದಿಗೆ ಕಾದಾಡಿ ಎಂದು  ಹೇಳಿದ ಉದಾಹರಣೆಗಳಿಲ್ಲ.

ಪ್ರವಾದಿವರ್ಯರು ಮತ್ತು ಅವರ ಅನುಯಾಯಿಗಳನ್ನು  ಕುರೈಷ್ ಗೋತ್ರದವರು ಸತತ ಮೂರು ವರ್ಷಗಳ ಕಾಲ ಸಾಮಾಜಿಕ ಬಹಿಷ್ಕಾರವನ್ನು ಒಡ್ಡಿದರು. ಆ ಮೂರು ವರ್ಷಗಳ ಕಾಲ ತಮಗೆ ಬಂದಂತಹ ಎಲ್ಲ ಸಂಕಷ್ಟಗಳನ್ನು  ಪ್ರವಾದಿವರ್ಯರು ಮತ್ತವರ ಸಹಚರರು ತಾಳ್ಮೆಯಿಂದಲೇ ಎದುರಿಸಿದರು. ಪ್ರವಾದಿವರ್ಯರ ವಿರೋಧಿಗಳು ಅವರನ್ನು ಕೊಲ್ಲುವ ಕುತಂತ್ರ ಹೂಡಿದರು. ಆಗ ಬೇರೆ ದಾರಿಕಾಣದೆ ಪ್ರವಾದಿವರ್ಯರು ತನ್ನ ಕೆಲವು ಸಹಚರರೊಂದಿಗೆ ಮಕ್ಕಾದಿಂದ ಮದೀನಾದೆಡೆಗೆ ವಲಸೆ ಹೋದರು. ಪ್ರವಾದಿವರ್ಯರು ತಮ್ಮ ಅನುಯಾಯಿಗಳಿಗೆ ಕೂಡ ಇದೇ (ವಲಸೆಹೋಗುವ) ಸಲಹೆಯನ್ನು ನೀಡಿದರು.

ಪ್ರವಾದಿವರ್ಯರ ವಿರೋಧಿಗಳು ಮದೀನಾದಲ್ಲಿಯೂ (ಮಕ್ಕಾದಲ್ಲಿ ತಮಗೆ ಸೇರಿದ ಆಸ್ತಿ–ಪಾಸ್ತಿ ಎಲ್ಲವನ್ನೂ ತೊರೆದು ಖಾಲಿ ಕೈಯಲ್ಲಿ ಮದೀನಾಕ್ಕೆ ವಲಸೆ ಬಂದು ಹೊಸಬದುಕು ಕಟ್ಟಿಕೊಳ್ಳುತ್ತಿದ್ದ)  ಪ್ರವಾದಿ ಮತ್ತವರ ಅನುಯಾಯಿಗಳನ್ನು ನೆಮ್ಮದಿಯಿಂದ ಬದುಕಲು ಬಿಡಲಿಲ್ಲ.  ಅವರ ಜೀವನವನ್ನು ಶೋಚನೀಯವಾಗಿಸಲು ತಮ್ಮಿಂದ ಏನೆಲ್ಲಾ ಮಾಡಲು ಸಾಧ್ಯವೋ, ಅವೆಲ್ಲವನ್ನೂ ಪ್ರವಾದಿವರ್ಯರ ವಿರೋಧಿಗಳು ಮಾಡಿದರು.

ಅಂತಹ ಸಂದರ್ಭದಲ್ಲಿ ಈ ಕೆಳಗಿನ ಕುರ್ ಆನ್ ಸೂಕ್ತವು ಅವತೀರ್ಣಗೊಂಡಿತು.

“ತಮ್ಮ ಆಣೆಯನ್ನು ಮುರಿದವರ ಮತ್ತು ಸಂದೇಶವಾಹಕನನ್ನು ಗಡಿಪಾರು ಮಾಡಲು ಪಿತೂರಿ ಮಾಡಿದವರ ವಿರುದ್ಧ ನೀವು ಹೋರಾಡುವುದಿಲ್ಲವೇ? ನಿಮ್ಮ ಮೇಲೆ ಮೊದಲು ದಾಳಿ ಮಾಡಿದರು ಅವರು. ನೀವು ಅವರಿಗೆ ಭಯಪಡುತ್ತೀರಾ? ನೀವು ನಿಜವಾದ ವಿಶ್ವಾಸಿಗಳೇ ಆಗಿದ್ದರೆ ಖಂಡಿತವಾಗಿಯೂ ದೇವನು ನಿಮ್ಮ ಭಯಕ್ಕೆ ಹೆಚ್ಚು ಅರ್ಹನಾಗಿದ್ದಾನೆ.” (ಕುರ್ ಆನ್ 9–13)

ಈ ಮೇಲಿನ ಕುರ್ ಆನ್ ಸೂಕ್ತವು ವಿಶ್ವಾಸಿಗಳಿಗೆ ಹೋರಾಡಲು ಅನುಮತಿ ನೀಡಿತು. ಈ ಅನುಮತಿ ಷರತ್ತುಬದ್ಧವಾಗಿತ್ತು; ಕೇವಲ ವಿರೋಧಿಗಳಿಂದ ಆಕ್ರಮಣಕ್ಕೊಳಗಾಗುವ ಭೀತಿಯಿರುವಾಗ ಮಾತ್ರ ರಕ್ಷಣಾತ್ಮಕ ಹೆಜ್ಜೆಯಾಗಿ ಹೋರಾಡಬೇಕೇ ವಿನಹ ತಾವಾಗಿಯೇ ಎದುರಾಳಿಗಳ ಮೈ ಮೇಲೆ ಬೀಳಬಾರದೆಂಬ ಷರತ್ತಾಗಿತ್ತದು. ಒಟ್ಟಾರೆ ಹೇಳುವುದಾದರೆ ಪ್ರವಾದಿವರ್ಯರ ಕಾಲದಲ್ಲಿ ನಡೆದ ಬದ್ರ್ ಹಾಗೂ ಉಹುದ್ ಯುದ್ಧಗಳು ಪ್ರವಾದಿವರ್ಯರ ವಿರೋಧಿಗಳ ಅತಿರೇಕಗಳಿಗೆ ಉತ್ತರವಾಗಿ ಮುಸ್ಲಿಮರು ತೆಗೆದುಕೊಂಡ ರಕ್ಷಣಾತ್ಮಕ ಹೆಜ್ಜೆಯಾಗಿತ್ತೇ ವಿನಹ ಮುಸ್ಲಿಮರೇ ಪ್ರಪ್ರಥಮವಾಗಿ ತಮ್ಮ ಎದುರಾಳಿಗಳ ಮೇಲೆ ದಂಡೆತ್ತಿ ಹೋದುದಲ್ಲ ಎಂಬುದಂತೂ ಸತ್ಯ.

ಈ ಯುದ್ಧಗಳ ನಂತರ ಪ್ರವಾದಿವರ್ಯರಿಗೆ ತಮ್ಮ ವಿರೋಧಿಗಳು, 10,000 ಸಶಸ್ತ್ರ ಜನರ ಸೈನ್ಯದೊಂದಿಗೆ ಮದೀನಾದ ಮೇಲೆ ದಾಳಿ ಮಾಡಲು ಬರುತ್ತಿದ್ದಾರೆಂಬ ಸುದ್ದಿ ತಿಳಿದುಬಂತು. ಮದೀನಾದ ಹೊರವಲಯದ ಸುತ್ತಲೂ ಆಳವಾದ ಕಂದಕವನ್ನು ತೋಡುವ ಮೂಲಕ ಸಶಸ್ತ್ರಯುತ ಯುದ್ಧವು ನಡೆಯದಂತೆ ಮುಂಜಾಗ್ರತೆ ವಹಿಸಲಾಯಿತು. ಈ ಮೂಲಕ ಯಾವುದೇ ರಕ್ತಪಾತ ಹಾಗೂ ಯಾರದೇ ಜೀವಹಾನಿಗಳಾಗದಂತೆ ನೋಡಿಕೊಳ್ಳುವಲ್ಲಿ ಪ್ರವಾದಿವರ್ಯರು ಸಂಪೂರ್ಣವಾಗಿ ಯಶಸ್ವಿಯಾದರು.

## ಪ್ರವಾದಿವರ್ಯರ ಧ್ಯೇಯ

ದೇವನ ಸಂದೇಶವನ್ನು ಮನುಕುಲಕ್ಕೆ ತಲುಪಿಸುವ ಬಹುದೊಡ್ಡ ದೈವಿಕ ಹೊಣೆಗಾರಿಕೆ ಪ್ರವಾದಿಯವರ ಸುಪರ್ದಿಗೆ ಒಪ್ಪಿಸಲಾಗಿತ್ತು. ಸಮಾಜದಲ್ಲಿ ಸಾಮರಸ್ಯ ಮತ್ತು ಶಾಂತಿಯುತವಾದ ವಾತವರಣವಿದ್ದಾಗ ಮಾತ್ರ ಇಂತಹ ದೊಡ್ಡ ಹೊಣೆಗಾರಿಕೆಯನ್ನು ಯಶಸ್ವಿಯಾಗಿ ನಿಭಾಯಿಸಲು ಸಾಧ್ಯ.

ಶಾಂತಿಯುತವಾದ ವಾತಾವರಣದ ನಿರ್ಮಾಣ ಮಾಡಬೇಕಾದಲ್ಲಿ; ಅದಕ್ಕಾಗಿ ಒಂದು ದೊಡ್ಡ ಮೌಲ್ಯವನ್ನು ತೆರಬೇಕು. ಪ್ರವಾದಿವರ್ಯರು ಅಂತಹ ಶಾಂತಿಯುತ

ವಾತವರಣವನ್ನು ನಿರ್ಮಿಸಲಿಕ್ಕಾಗಿ ಬಹಳಷ್ಟು ಅಡಚಣೆಗಳನ್ನು, ಸಂಕಷ್ಟಗಳನ್ನು ಸಹಿಸುತ್ತಾ, ಪರಿಶ್ರಮದ ರೂಪದಲ್ಲಿ ಆ ಮೌಲ್ಯವನ್ನು ತೆತ್ತರು. ಶಾಂತಿಯುತ ಸಮಾಜವನ್ನು ನಿರ್ಮಿಸಲು ಅವಕಾಶ ಸಿಕ್ಕಾಗಲೆಲ್ಲ ಅವರು ಅದನ್ನು ಸದುಪಯೋಗಪಡಿಸಿಕೊಂಡರು; ಹಾಗೆ ಅವಕಾಶಗಳನ್ನು ಬಳಸಿಕೊಳ್ಳುವಾಗ ಎದುರಾಗುತ್ತಿದ್ದ ಸಮಸ್ಯೆಗಳನ್ನು ಅವರು ಕಡೆಗಣಿಸುತ್ತಿದ್ದರು. ಪ್ರವಾದಿವರ್ಯರ ವಿರೋಧಿಗಳು ಚಿಕ್ಕಪುಟ್ಟ ವಿಷಯಗಳಿಗೆಲ್ಲಾ ಪ್ರತೀಕಾರವಾಗಿ ಯುದ್ಧಕ್ಕಿಳಿಯುವಂತೆ ಪ್ರವಾದಿ ಮತ್ತವರ ಸಂಗಡಿಗರನ್ನು ನಿರಂತರ ಪ್ರಚೋದಿಸುತ್ತಿದ್ದರು. ಇದರ ಹೊರತಾಗಿಯೂ ಪ್ರವಾದಿವರ್ಯರು ಮತ್ತವರ ಸಂಗಡಿಗರು, ಪರಸ್ಪರ ಘರ್ಷಣೆಗಳನ್ನು ತಪ್ಪಿಸುವ ಸಲುವಾಗಿ; ದೈವಿಕ ಮಾರ್ಗದರ್ಶದ ಬೆಳಕಿನಲ್ಲಿ ಸಾಗುತ್ತಾ ತಾಳ್ಮೆ, ಸಹಿಷ್ಣುತೆಯನ್ನೇ ನೆಚ್ಚಿಕೊಂಡರು.

ಅವರು ಯುದ್ಧದ ಕಿಡಿಯನ್ನು ಹೊತ್ತಿಸಲು ಯತ್ನಿಸಿದಾಗಲೆಲ್ಲ ದೇವನದನ್ನು ಆರಿಸಿಬಿಡುತ್ತಾನೆ ಎಂದು ಕುರ್ ಆನ್ ಉಲ್ಲೇಖಿಸುತ್ತದೆ. (5–64)

ಇನ್ನು ಹುದೈಬಿಯಾ ಒಪ್ಪಂದದ ಉದಾಹರಣೆಯನ್ನು ನೋಡಿ; ಅಲ್ಲಿ ಪ್ರವಾದಿವರ್ಯರು ತನ್ನ ವಿರೋಧಿಗಳ ವಿಧಿಸಿದ ಎಲ್ಲಾ ಷರತ್ತುಗಳನ್ನು ಒಪ್ಪಿಕೊಂಡರು. ಮುಂದೆ, ಈ ಒಪ್ಪಂದವನ್ನು ವಿರೋಧಿಗಳೇ ಮುರಿದರು, ಅದೇ ಅವರ ಶರಣಾಗತಿಗೆ ಕಾರಣವಾಯಿತು. ಪ್ರವಾದಿವರ್ಯರು, ಅವರು ಮಾಡಿದ ಎಲ್ಲ ದುಷ್ಕೃತ್ಯಗಳ ಹೊರತಾಗಿಯೂ; ಅವರಿಂದ ಪ್ರತೀಕಾರವನ್ನು ತೆಗೆದುಕೊಳ್ಳುವುದಂತೂ ದೂರದ ಮಾತು. ಅವರನ್ನು ಕಿಂಚಿತ್ತು ಅವಮಾನಿಸಲೂ ಅನುಮತಿಸಲಿಲ್ಲ. ಅಷ್ಟೇ ಅಲ್ಲ; “ಹೋಗಿರಿ, ನೀವೆಲ್ಲರೂ ಸಂಪೂರ್ಣ ಸ್ವತಂತ್ರರು” ಎನ್ನುವ ಐತಿಹಾಸಿಕ ಘೋಷಣೆಯ ಮೂಲಕ ತನ್ನ ಎದುರಾಳಿಗೆಲ್ಲರಿಗೂ ಪ್ರವಾದಿವರ್ಯರು ಸಾರ್ವತ್ರಿಕ ಕ್ಷಮೆಯನ್ನು ಘೋಷಿಸಿದರು.

## ಒಂದು ವಸ್ತುನಿಷ್ಠ ಅಧ್ಯಯನ

ಒಂದು ವೇಳೆ ನಾವು, ಪ್ರವಾದಿವರ್ಯರ ಸಂಪೂರ್ಣ 23 ವರ್ಷಗಳ ಪ್ರವಾದಿತ್ವದ ಜೀವನವನ್ನು ವಸ್ತುನಿಷ್ಠವಾಗಿ ಅಧ್ಯಯನ ಮಾಡಿದ್ದೇ ಆದರೆ, ಅವರು ಕೇವಲ ಶಾಂತಿಯನ್ನು ಸಾರುವ ಪ್ರವಾದಿಯಾಗಿದ್ದರು ಎಂಬ ವಾಸ್ತವ ನಮಗೆ ಸ್ಪಷ್ಟವಾಗಿ ಅರ್ಥವಾಗುತ್ತದೆ. ಇತಿಹಾಸದ ಇನ್ನಿತರ ಯುದ್ಧಗಳೊಂದಿಗೆ ನಾವು ಪ್ರವಾದಿವರ್ಯರು ಭಾಗವಹಿಸಿದ ಯುದ್ಧಗಳನ್ನು ಹೋಲಿಸಿ ನೋಡಿದರೆ, ಪ್ರವಾದಿವರ್ಯರ ಧ್ಯೇಯವು ಕೇವಲ ಅಹಿಂಸಾತ್ಮಕ ಧ್ಯೇಯವಾಗಿತ್ತು ಎಂಬ ವಾಸ್ತವ ನಮಗೆ ಚೆನ್ನಾಗಿ ಮನದಟ್ಟಾಗುತ್ತದೆ; ಇನ್ನು ಅವರ ಜೀವಿತ ಕಾಲದಲ್ಲಿ ಸಂಭವಿಸಿದ ಯುದ್ಧಗಳು, ಅನಿವಾರ್ಯ ಸಂದರ್ಭಗಳಲ್ಲಿ ಅವರು ರಕ್ಷಣಾತ್ಮಕವಾಗಿ ಇಟ್ಟ ಹೆಜ್ಜೆಯಾಗಿತ್ತು ಎಂಬ ಸತ್ಯವೂ ನಮಗೆ ತಿಳಿದುಬರುವುದು.

ಇತಿಹಾಸದಲ್ಲಿ ಇನ್ನಿತರ ಯುದ್ಧಗಳಲ್ಲಿ ಸಂಭವಿಸಿದ ಅಪಾರ ಸಾವುನೋವುಗಳಿಗೆ ಹೋಲಿಸಿದರೆ, ಪ್ರವಾದಿವರ್ಯರು ಭಾಗವಹಿಸಿದ್ದ ಯುದ್ಧಗಳಲ್ಲಿ ಕೊಲ್ಲಲ್ಪಟ್ಟವರ ಸಂಖ್ಯೆ ತೀರಾ ಕಡಿಮೆ ಎಂದೇ ಹೇಳಬಹುದು.

(ಓದುಗರಿಗೆ ವಾಸ್ತವ ತಿಳಿಯಲು ಸಹಕಾರಿಯಾಗಲೆಂದು ಇಸ್ಲಾಮೀ ಯುದ್ಧಗಳೂ ಸೇರಿದಂತೆ ವಿಶ್ವದಲ್ಲಿ ಸಂಭವಿಸಿದ್ದ ಇನ್ನಿತರ ಪ್ರಸಿದ್ಧ ಯುದ್ಧಗಳು ಹಾಗೂ ಅವುಗಳಲ್ಲಾದ ಸಾವು–ನೋವುಗಳ ಸಂಖ್ಯೆಯನ್ನು ಈ ಕೆಳಗೆ ತುಲನಾತ್ಮಕವಾಗಿ ನೀಡಲಾಗಿದೆ.)

| ಯುದ್ಧ | ನಡೆದ ವರ್ಷ | ಕಾಲಾವಧಿ | ಸಾವುನೋವುಗಳು |
|---|---|---|---|
| 2ನೇ ವಿಶ್ವಮಹಾಯುದ್ಧ | 1939 – 1945 | 6 ವರ್ಷಗಳು | 65 ಮಿಲಿಯನ್ |
| ಅಮೇರಿಕನ್ ಅಂತರ್ಯುದ್ಧ | 1861 – 1865 | 4 ವರ್ಷಗಳು | 5,00,000 |
| ಪಾಣಿಪತ್ ಕದನ | 14 ಜನವರಿ 1761 | 1 ದಿನ | 100,000 |
| ಗಲ್ಫ್ ಯುದ್ಧ | ಆಗಸ್ಟ್-1990 – ಫೆಬ್ರವರಿ-1991 | 7 ತಿಂಗಳು | 25,000 |
| ಇರಾಕ್ ಯುದ್ಧ | ಮಾರ್ಚ್ 2003 – ಡಿಸೆಂಬರ್ 2011 | 8½ ವರ್ಷಗಳು | 35,000 |
| ಬದ್ರ್, ಉಹುದ್ ಮತ್ತು ಹುನೈನ್ ಯುದ್ಧಗಳು | 13 ಮಾರ್ಚ್ 624 ಇಸವಿ<br>23 ಮಾರ್ಚ್ 625 ಇಸವಿ<br>ಜನವರಿ 630ನೇ ಇಸವಿ | 1½ ದಿನ | ಒಟ್ಟು ಸಾವಿನ ಸಂಖ್ಯೆ- 1018 |

ಮೇಲೆ ನೀಡಲಾದ ಇತಿಹಾಸದ ಯುದ್ಧಗಳ ವಿವರಗಳಿಗೆ ಹೋಲಿಸಿದರೆ, ಪ್ರವಾದಿವರ್ಯರ ಕಾಲದಲ್ಲಿ ನಡೆದ ರಕ್ಷಣಾತ್ಮಕ ಯುದ್ಧಗಳು ಬದ್ರ್, ಉಹುದ್ ಮತ್ತು ಹುನೈನ್. ಈ ಎಲ್ಲ ಯುದ್ಧಗಳ ಹೋರಾಟದ ಒಟ್ಟು ಕಾಲಾವಧಿ ಕೇವಲ 1½ ದಿನಗಳಿಗೆ ಸಮನಾಗಿತ್ತು. ಈ ಯುದ್ಧಗಳಲ್ಲಿ ಸಾವುನೋವುಗಳ ಒಟ್ಟು ಸಂಖ್ಯೆ 1018.

ಪ್ರವಾದಿಯವರ ಜೀವನದ ವಸ್ತುನಿಷ್ಠ ತಿಳುವಳಿಕೆಯ ಕೊರತೆಯಿಂದಾಗಿ, ಮುಸ್ಲಿಂ ಜೀವನಚರಿತ್ರಾಕಾರರು ಆ ಕಾಲದ ಚಾಲ್ತಿಯಲ್ಲಿರುವ ಪದ್ಧತಿ ಹಾಗೂ ಸಂಸ್ಕೃತಿಗಳನ್ನು ನಿರ್ಲಕ್ಷಿಸಿದ ಕಾರಣ, ವಾಸ್ತವವನ್ನು ಸರಿಯಾಗಿ ಓದುಗರ ಮುಂದಿಡುವಲ್ಲಿ ವಿಫಲರಾಗಿದ್ದಾರೆ. ಈ ಕಾರಣದಿಂದಾಗಿ, ಪ್ರವಾದಿಯವರ ಜೀವನದ ಬಗ್ಗೆ ಅವರ ಬರಹಗಳು ಯುದ್ಧದ ಚಿತ್ರಣದಂತೆ ತೋರುತ್ತದೆ.

ಮತ್ತೊಂದೆಡೆ, ಮುಸ್ಲಿಮೇತರ ಪ್ರವಾದಿಯ ಜೀವನಚರಿತ್ರಾಕಾರರು ವಿಭಿನ್ನ ವಿಧಾನವನ್ನು ಅಳವಡಿಸಿಕೊಂಡಿದ್ದಾರೆ. ಅವರು, ಪ್ರವಾದಿವರ್ಯರ ಜೀವನದ ಹೆಚ್ಚಿನ ಪ್ರಮುಖ ಘಟನೆಗಳನ್ನು ನಿರ್ಲಕ್ಷಿಸಿದ್ದಾರೆ. ಪ್ರವಾದಿವರ್ಯರ ಜೀವನದಲ್ಲಿ, ಬೇರೆ ದಾರಿ ಇಲ್ಲದೆ, ಅನಿವಾರ್ಯವಾಗಿ ತೆಗೆದುಕೊಳ್ಳಬೇಕಾಗಿ ಬಂದ ರಕ್ಷಣಾತ್ಮಕ ಹೆಜ್ಜೆಗಳನ್ನೇ ಅವರ ವ್ಯಕ್ತಿತ್ವದ ಬುನಾದಿಯಂತೆ ಚಿತ್ರಿಸಿದ್ದಾರೆ. ಇದರಿಂದಾಗಿ, (ಮುಸ್ಲಿಮೇತರ ಚರಿತ್ರಾಕಾರರು ವಾಸ್ತವವನ್ನು ಹೀಗೆ ಕಡೆಗಣಿಸಿದ ಕಾರಣದಿಂದಾಗಿ) ಓದುಗರಿಗೆ ಪ್ರವಾದಿವರ್ಯರನ್ನು ಒಬ್ಬ 'ಶಾಂತಿದೂತ' ಎಂದು ಪರಿಚಯಿಸುವ ಬದಲು, ಒಬ್ಬ 'ಯುದ್ಧೋನ್ಮಾದದ ಪ್ರವಾದಿ' ಎಂದು ತಪ್ಪಾಗಿ ಬಿಂಬಿಸಿದ್ದಾರೆ.

ಪ್ರವಾದಿವರ್ಯರ ಜೀವನವನ್ನು, ಮುಸ್ಲಿಂ ಸಂಸ್ಕೃತಿಗಿಂತ ಭಿನ್ನವಾಗಿ ನೋಡಲು ಮುಸ್ಲಿಮೇತರ ಚರಿತ್ರಾಕಾರರಿಗೆ ಸಾಧ್ಯವಾಗಲಿಲ್ಲ. ಇಸ್ಲಾಮಿನ ಹೆಸರಿನಲ್ಲಿ ಪಸರಿಸಲಾಗುತ್ತಿರುವ ಭಯೋತ್ಪಾದನೆಯು, ಇಸ್ಲಾಮಿನ ಪ್ರವಾದಿಯ ಬೋಧನೆಗಳ ಫಲಿತಾಂಶವಾಗಿದೆ ಎಂದು ಅವರು ತಪ್ಪಾಗಿ ಊಹಿಸಲು ಇದು ಮುಖ್ಯ ಕಾರಣವಾಯಿತು.

ಪ್ರವಾದಿವರ್ಯರ ಅನೇಕ ಜೀವನಚರಿತ್ರೆಕಾರರಿಗೆ, ಅವರ ಸೌಮ್ಯ ಸ್ವಭಾವದ ನೈಜ ವ್ಯಕ್ತಿತ್ವವು, ಎಲ್ಲೋ ಒಂದು ತೆರನಾದ ನ್ಯೂನ್ಯತೆಯಂತೆ ಕಂಡುಬಂತು. ಪ್ರವಾದಿವರ್ಯರ ಸೌಮ್ಯ, ಶಾಂತ ಸ್ವಭಾವವು ಜಗತ್ತಿನ ಇತರ ನಾಯಕರ ಮಾನದಂಡಗಳಿಗೆ (ಅವರ ಯುದ್ಧೋನ್ಮಾದ, ಬೇರೆ ದೇಶಗಳ ಮೇಲೆ ದಂಡೆತ್ತಿ ಹೋಗುವ ಅವರ ತವಕ ಇತ್ಯಾದಿ.) ಹೋಲಿಸಿದಾಗ, ಚರಿತ್ರಾಕಾರರಿಗೆ ಇದೇ (ಅವರ ಶಾಂತ ಸ್ವಭಾವವೇ) ಅವರಲ್ಲಿರುವ ಕೊರತೆಯಂತೆ ಕಂಡಿತು, ಪ್ರವಾದಿವರ್ಯರ ಸಮಕಾಲೀನ ನಾಯಕರೆಲ್ಲರೂ ಮಹಾನ್ ವಿಜಯಶಾಲಿಗಳು ಮತ್ತು ಯುದ್ಧೋನ್ಮಾದ ಹೊಂದಿದವರು. ಹಾಗಾಗಿ, ಈ ಜೀವನಚರಿತ್ರಾಕಾರರು ತಮ್ಮ ಪ್ರವಾದಿಯ ಚಿತ್ರಣವನ್ನು ಒಬ್ಬ ಯುದ್ಧೋನ್ಮಾದ ಇರುವ ಮಹಾಯೋಧನಂತೆ ಓದುಗರ ಮುಂದೆ ಪ್ರಸ್ತುತಪಡಿಸಲು ಪ್ರಯತ್ನಿಸಿದರು. ಅವರ ದೃಷ್ಟಿಯಲ್ಲಿ, ಇದೇ ಚಿತ್ರಣ ಹೆಚ್ಚು ಉತ್ತಮವಾಗಿತ್ತು.

ಇದೆಲ್ಲದರ ಹೊರತಾಗಿಯೂ, ಪ್ರವಾದಿವರ್ಯರ ಈ ಚಿತ್ರಣವು ಸಂಪೂರ್ಣವಾಗಿ ಆಧಾರರಹಿತ ಮತ್ತು ಲೇಖಕರ ಸ್ವಯಂ ಪರಿಕಲ್ಪನೆಯಾಗಿದೆ. ವಾಸ್ತವದಲ್ಲಿ ಪ್ರವಾದಿವರ್ಯರದ್ದು 'ಶಾಂತಿಪ್ರಿಯ' ವ್ಯಕ್ತಿತ್ವವಾಗಿತ್ತು. ಪ್ರವಾದಿವರ್ಯರು; ಜನರೊಂದಿಗೆ ಸಂಘರ್ಷಕ್ಕಿಳಿಯುವ ಮೂಲಕ ಅವರನ್ನು ಸೋಲಿಸುವುದರಲ್ಲಿ ನಂಬಿಕೆಯುಳ್ಳವರಾಗಿರಲಿಲ್ಲ; ಬದಲಿಗೆ, ಪ್ರೀತಿ ಮತ್ತು ಸಹಾನುಭೂತಿಗಳ ಮೂಲಕ ಜನರ ಹೃದಯಗಳನ್ನು ಗೆದ್ದು, ಅವರಿಗೆ ಹೊಸಜೀವನ ನೀಡುವುದರಲ್ಲಿ ಅವರು ಬಲವಾದ ನಂಬಿಕೆಯನ್ನು ಹೊಂದಿದ್ದವರಾಗಿದ್ದರು.

ವಿಶ್ವಾಸಿಗಳೇ, ದೇವನು ಮತ್ತು ಆತನ ಪ್ರವಾದಿಯು ನಿಮಗೆ ಜೀವಚೈತನ್ಯ ನೀಡುವ ಕಡೆಗೆ ನಿಮ್ಮನ್ನು ಕರೆದಾಗ ಆ ಕರೆಗೆ ಓಗೊಡಿರಿ ಎಂದು ಕುರಾನ್ ಹೇಳುತ್ತದೆ. (ಕುರಾನ್ 8:24)

ಪ್ರವಾದಿವರ್ಯರ ಧ್ಯೇಯೋದ್ದೇಶವು ಚಕ್ರವರ್ತಿಗಳು ಮತ್ತು ರಾಜರಿಗಿಂತ ತುಂಬಾ ಭಿನ್ನವಾಗಿತ್ತು ಎಂಬುದು ಕುರಾನ್ ಆನ್ ನ ಅಧ್ಯಯನದಿಂದ ನಮಗೆ ಸ್ಪಷ್ಟವಾಗುತ್ತದೆ. ರಾಜ ಮತ್ತು ಚಕ್ರವರ್ತಿಗಳ ಧ್ಯೇಯೋದ್ದೇಶವು ಯುದ್ಧಗಳ ಮೂಲಕ ಬೇರೆ ದೇಶಗಳ ಮೇಲೆ ದಂಡೆತ್ತಿ ಹೋಗುವುದು ಮತ್ತು ವಿಜಯ ಸಾಧಿಸುವ ಮೂಲಕ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸುವುದಾಗಿತ್ತು.

ಆದರೆ, ಪ್ರವಾದಿವರ್ಯರ ಧ್ಯೇಯೋದ್ದೇಶವು  ಜನರನ್ನು ಆಳುವುದಾಗಲಿ ಅವರ ಮೇಲೆ ಅಧಿಕಾರ ಚಲಾಯಿಸುವುದಾಗಿರಲಿ ಖಂಡಿತ ಆಗಿರಲಿಲ್ಲ. ಬದಲಿಗೆ, ಜನರ ಮನಸ್ಸು ಮತ್ತು ಹೃದಯಗಳನ್ನು ಆಧ್ಯಾತ್ಮಿಕತೆಯ ಕಡೆಗೆ ವಾಲಿಸುವ ಮೂಲಕ ಅವರಿಗೆ ದೈವಾಧಾರಿತ ಜೀವನ ಕ್ರಮವನ್ನು ಕಲಿಸುವುದು ಹಾಗೂ ಅವರನ್ನು ದೈವಿಕ ವ್ಯಕ್ತಿತ್ವ ಉಳ್ಳವರನ್ನಾಗಿ (ಉನ್ನತ ವ್ಯಕ್ತಿತ್ವ ಹೊಂದಿದವರನ್ನಾಗಿ) ಅವರನ್ನು ಮಾರ್ಪಡಿಸುವುದಾಗಿತ್ತು.

ಮೇಲಿನ ವಿಶ್ಲೇಷಣೆಯಿಂದ ಪ್ರವಾದಿ ಮುಹಮ್ಮದರು ಎಷ್ಟು ಮಾತ್ರಕ್ಕೂ ಹಿಂಸೆಯನ್ನು ಪ್ರಚೋದಿಸುವ ಪ್ರವಾದಿಯಾಗಿರಲಿಲ್ಲ; ಬದಲಾಗಿ ಅವರು ಕೇವಲ ಶಾಂತಿಯನ್ನು ಸಾರುವ ಪ್ರವಾದಿಯಾಗಿದ್ದರು ಎಂಬುದರ ಸ್ಪಷ್ಟ ಅರಿವು ನಮಗಾಗುತ್ತದೆ. ಪ್ರವಾದಿವರ್ಯರ ಜೀವನ ಚರಿತ್ರೆಯ ಕುರಿತು ಮುಸ್ಲಿಂ ಮತ್ತು ಮುಸ್ಲಿಮೇತರ ಜೀವನಚರಿತ್ರಾಕಾರರು ಅನುಸರಿಸಿರುವ ವಿಧಾನವು ಸರಿಯಾದುದಲ್ಲ ಎಂಬೂದು ಇದರಿಂದ ಸ್ಪಷ್ಟವಾಗುತ್ತದೆ.

**ಕೊನೇಮಾತು**

ಪ್ರವಾದಿ ಮುಹಮ್ಮದ್ದರ ಬಗ್ಗೆ  ವಿಶ್ವಪ್ರಸಿದ್ಧ ವಿದ್ವಾಂಸರ ಅಭಿಪ್ರಾಯಗಳನ್ನು ಹಂಚಿಕೊಳ್ಳುವುದರೊಂದಿಗೆ ನಾವು ಈ ಅಧ್ಯಯನವನ್ನು ಮುಕ್ತಾಯಗೊಳಿಸಲು ಬಯಸುತ್ತೇವೆ.

**ಸರ್ ಜಾರ್ಜ್ ಬರ್ನಾರ್ಡ್ ಶಾ:** “ನಾನು ಅವರನ್ನು (ಪ್ರವಾದಿವರ್ಯರ ಜೀವನದ ಕುರಿತು) ಅಧ್ಯಯನ ಮಾಡಿರುವೆ. ಅವರೊಬ್ಬ ಅದ್ಭುತ ವ್ಯಕ್ತಿ, ಅವರನ್ನು ಮಾನವೀಯತೆಯ ಸಂರಕ್ಷಕ ಎಂದೇ ಕರೆಯಬೇಕು ಎಂಬುದು ನನ್ನ ಅಂಬೋಣ.

**ಮಹಾತ್ಮಾ ಗಾಂಧೀಜಿ:** ಮಾನವಸಮೂಹದ ಕೋಟ್ಯಂತರ ಜನರ ಹೃದಯದಲ್ಲಿ ಇಂದು ಮನೆಮಾಡಿರುವ ಅತ್ಯುನ್ನತ ವ್ಯಕ್ತಿಯೋರ್ವರ ಜೀವನದ ಕುರಿತು ನಾನು ಅಧ್ಯಯನ ಮಾಡಲು ಬಯಸಿದ್ದೆ.

ಪ್ರವಾದಿವರ್ಯರ ಜೀವನದ ಆ ಕಾಲಘಟ್ಟದಲ್ಲಿ ಇಸ್ಲಾಮಿಗೆ ವಿಜಯ ದೊರಕಿಸಿಕೊಟ್ಟಿದ್ದು ಖಡ್ಗವಲ್ಲ ಬದಲಾಗಿ; ಅವರ ತೀವ್ರ ನಿರಾಡಂಬರತೆ, ಅವರ ಪರಿಪೂರ್ಣ ಕಪಟರಹಿತ ಮನೋಭಾವ, ಕೊಟ್ಟಮಾತಿಗೆ, ಮಾಡಿಕೊಂಡ ಕರಾರಿಗೆ ಎಂದಿಗೂ ಎರಡು ಬಗೆಯದ ಅವರ ನಿಷ್ಠೆ, ತನ್ನ ಸ್ನೇಹಿತ ಮತ್ತು ಸಹಚರರಿಗೆ ಅವರು ನೀಡುತ್ತಿದ್ದ ಅಕ್ಕರೆ ತುಂಬಿದ ಆದ್ರತೆ, ಸತ್ಯಪ್ರಚಾರ ಕಾರ್ಯದಲ್ಲಿ ಅವರು ಹೊಂದಿದ್ದ ಧೈರ್ಯ, ಆ ಕುರಿತು ಅವರಿಗಿದ್ದ ನಿರ್ಭಯತೆ ಮತ್ತು ತನ್ನ ಕಾರ್ಯಧ್ಯೇಯದಲ್ಲಿ ಅವರು ದೇವನ ಮೇಲೆ ಹೊಂದಿದ್ದ ಪರಿಪೂರ್ಣ ನಂಬಿಕೆ-ವಿಶ್ವಾಸಗಳೇ ಕಾರಣ ಎಂಬ ವಾಸ್ತವ ನನಗೆ ಈಗ ಹಿಂದೆಂದಿಗಿಂತಲೂ ಹೆಚ್ಚು ಮನವರಿಕೆಯಾಗಿದೆ.

ಒಟ್ಟಾರೆ ಹೇಳುವುದಾದರೆ ಅವರು ಹೊಂದಿದ್ದ ಇಂತಹ ಸದ್ಗುಣಗಳೇ ಅವರ ಮುಂದಿದ್ದ ಸವಾಲುಗಳನ್ನು, ಅವರು ಹೊಂದಿದ್ದ ಅಡೆತಡೆಗಳನ್ನು ಸೋಲಿಸುವ ಅಸ್ತ್ರವಾಯಿತೇ ಹೊರತು ಖಂಡಿತವಾಗಿಯೂ ಖಡ್ಗವಲ್ಲ ಎಂಬುದೇ ವಾಸ್ತವ.

**ಎಡ್ವರ್ಡ್ ಗಿಬ್ಬನ್ ಮತ್ತು ಸೈಮನ್ ಓಕ್ಲೆ:** ಪ್ರವಾದಿ ಮುಹಮ್ಮದರಿಗೆ ಅವರ ಜೀವನದಲ್ಲಿ ದೊರೆತ ಮಹಾನ್ ಯಶಸ್ಸಿನ ಶ್ರೇಯ ಸಂಪೂರ್ಣವಾಗಿ ಅವರ ನೈತಿಕ ಬಲಕ್ಕೇ ಸಲ್ಲುತ್ತದೆ.

**ಅಲ್ಫೋನ್ಸ್ ಡಿ ಲಾ ಮಾರ್ಟೈನ್:** ಅತ್ಯಂತ ಶ್ರೇಷ್ಠ ಉದ್ದೇಶ, ಅತ್ಯಂತ ಕಡಿಮೆ ಸಾಧನ-ಸಲಕರಣೆ, ಬೆರಗುಗೊಳಿಸುವ ಫಲಿತಾಂಶ ಈ ಮೂರು ವಿಷಯಗಳು ಒಂದು ವೇಳೆ ಮಾನವ ಪ್ರತಿಭೆಯನ್ನು ಅಳೆಯುವ ಮಾನದಂಡಗಳಾಗಿದ್ದರೆ; ಯಾರಿಗಾದಾರೂ, ಇತಿಹಾಸದ ಬೇರಾವುದೇ ಮಹಾನ್ ವ್ಯಕ್ತಿಯನ್ನು ಪ್ರವಾದಿ ಮುಹಮ್ಮದರ ಜೊತೆಗೆ ಹೋಲಿಸಿ ನೋಡುವ ಧೈರ್ಯವಿದೆಯೇ?

**ಮೈಕೆಲ್ ಹಾರ್ಟ್:** ಪ್ರಪಂಚದ ಅತ್ಯಂತ ಪ್ರಭಾವಶಾಲಿ ವ್ಯಕ್ತಿಗಳ ಪಟ್ಟಿಯಲ್ಲಿ ಪ್ರವಾದಿ ಮುಹಮ್ಮದರಿಗೆ ಪ್ರಥಮ ಸ್ಥಾನ ನೀಡಿದ ನನ್ನ ಆಯ್ಕೆಯು ಹಲವು ಓದುಗರನ್ನು ಆಶ್ಚರ್ಯಚಕಿತಗೊಳಿಸಬಹುದು ಮತ್ತಿನ್ನಿತರರು ಈ ಕುರಿತು ನನ್ನನ್ನು ಪ್ರಶ್ನಿಸಲೂಬಹುದು. ಆದರೆ, ಇತಿಹಾಸದ ಅತ್ಯುನ್ನತ ವ್ಯಕ್ತಿಗಳ ಪೈಕಿ ಕೇವಲ ಪ್ರವಾದಿ ಮುಹಮ್ಮದರು ಮಾತ್ರ ಜಾತ್ಯತೀತ ಮತ್ತು ಧಾರ್ಮಿಕ ಈ ಎರಡೂ ರಂಗಗಳಲ್ಲಿ ಅಭೂತಪೂರ್ಣ ಯಶಸ್ಸು ಸಾಧಿಸಿದ ಏಕೈಕ ವ್ಯಕ್ತಿಯಾಗಿರುವರು.

**ಅನ್ನಿ ಬೆಸೆಂಟ್:** ಅರೇಬಿಯಾದ ಮಹಾನ್ ಪ್ರವಾದಿಯ ಜೀವನದ ಕುರಿತು ಅಧ್ಯಯನ ಮಾಡಿದ ಯಾರೇ ಆಗಿರಲಿ, ಅವರು ಬದುಕಿದ ಬಗೆ, ಅವರು ಜನರಿಗೆ ಶಿಕ್ಷಣ ನೀಡಿದ ರೀತಿ–ನೀತಿಯನ್ನು ಬಲ್ಲ ಯಾರಿಗೇ ಆಗಿರಲಿ; ಆ ಮಹಾನ್ ಪ್ರವಾದಿಯ ಕುರಿತು ಅಪಾರ ಗೌರವದ ಹೊರತಾಗಿ ಬೇರಾವ ಭಾವನೆಯೂ ಮೂಡಲು ಅಸಾಧ್ಯ ಎಂದು ನಾನು ಹೇಳಬಯಸುತ್ತೇನೆ.

ನಾನು ನಿಮ್ಮ ಮುಂದಿಡುತ್ತಿರುವ ವಿಷಯಗಳ ಪೈಕಿ ಹೆಚ್ಚಿನ ವಿಷಯಗಳು ನಿಮ್ಮಲ್ಲನೇಕರಿಗೆ ಈ ಮೊದಲೇ ಅನುಭವಕ್ಕೆ ಬಂದಿರಬಹುದು. ಇದರ ಹೊರತಾಗಿಯೂ ನಾನು ನನ್ನ ಭಾವನೆಯನ್ನು ನಿಮ್ಮೊಂದಿಗೆ ಹಂಚಿಕೊಳ್ಳಲಿಚ್ಛಿಸುತ್ತೇನೆ. ನಾನು ಪ್ರವಾದಿವರ್ಯರ ಕುರಿತು ಪ್ರತಿ ಬಾರಿ ಓದಿದಾಗಲೂ, ಅವರ ಕುರಿತು ಹೊಸದೊಂದು ಮೆಚ್ಚುಗೆಯ ಹಾದಿ ತೆರೆದುಕೊಳ್ಳುವುದು. ಹೌದು!, ನಾನು ಮತ್ತೆ ಮತ್ತೆ ಅವರನ್ನು ಓದಿದಾಗಲೆಲ್ಲಾ, ಅರೇಬಿಯಾದ ಆ ಮಹಾನ್ ಶಿಕ್ಷಕನ ಕುರಿತು ನನ್ನ ಹೃದಯದಲ್ಲಿ ಹೊಸದೊಂದು ಆಳವಾದ ಗೌರವದ ಭಾವನೆ ಮೂಡತೊಡಗುವುದು.

**ದಿವಾನ್ ಚಂದ್ ಶರ್ಮಾ:** ಪ್ರವಾದಿ ಮುಹಮ್ಮದರು ಸಾಕ್ಷಾತ್ ದಯೆಯ ಸ್ವರೂಪವಾಗಿದ್ದರು. ಅವರು ಬೀರಿದ ಆ (ಅವರ ದಯೆಯ ಆ) ವರ್ಚಸ್ಸನ್ನು ಅನುಭವಿಸಿದ ಅವರ ಸಹಚರರು ಅದನ್ನು (ಅವರು ನೀಡಿದ ದಯೆಯ ಶಿಕ್ಷಣವನ್ನು) ಎಂದಿಗೂ ಮರೆಯಲಿಲ್ಲ.

ಈ ವಿಷಯದ ಕುರಿತು ಹೆಚ್ಚಿನ ಮಾಹಿತಿಗಾಗಿ (ಆಂಗ್ಲಭಾಷೆಯಲ್ಲಿ) ದಯವಿಟ್ಟು
ಈ ಕೆಳಗಿನ ಲಿಂಕನ್ನು ಬಳಸಿ

**https://www.youtube.com/watch?v=zORckPqrz5y**

ಮೌಲಾನಾ ವಹೀದುದ್ದೀನ್ ಖಾನ್ ರ ಆಂಗ್ಲಭಾಷೆಯ ದ ಪ್ರೊಫೆಟ್ ಆಫ್
ಪೀಸ್ (ಸ.ಅ.) (ಪೆಂಗ್ವಿನ್ ಬುಕ್ಸ್) ಈ ಕೆಳಗಿನ ಲಿಂಕ್ ನಲ್ಲಿ ಲಭ್ಯವಿದೆ.

**www.goodwordbooks.com**

ಈ ಸಂಬಂಧಿತ ಮೌಲಾನಾ ವಹೀದುದ್ದೀನ್ ಖಾನ್ ರ ಅಂಕಣಗಳಿಗಾಗಿ
ದಯವಿಟ್ಟು ಈ ಕೆಳಗಿನ ಲಿಂಕ್ ಅನ್ನು ಬಳಸಿರಿ.

**https://www.speakintree.in/article/
end-misunderstandings-through-sound-arguments**

ನಾವು ಮೌಲಾನಾ ವಹೀದುದ್ದೀನ್ ಖಾನ್ ರವರು (1925–2021) ಸಂಸ್ಥಾಪಿಸಿದ "CPS ಇಂಟರ್ ನ್ಯಾಶನಲ್" ಇದರ ಮಾರ್ಗದರ್ಶನದಡಿಯಲ್ಲಿ ಕಾರ್ಯನಿರ್ವಹಿಸುವ

ಕಾರ್ಯಕರ್ತರಾಗಿದ್ದೇವೆ. ನಮ್ಮ ಸಂಸ್ಥೆಯು, ಪ್ರವಾದಿವರ್ಯರ ಧ್ಯೇಯೋದ್ದೇಶಕ್ಕನುಸಾರವಾಗಿ; ಜಗತ್ತಿನಲ್ಲಿ ಶಾಂತಿ–ಸೌಹಾರ್ದವನ್ನು ಸಂಸ್ಥಾಪಿಸುವ ಸಲುವಾಗಿ ಹಗಲಿರುಳು ಕಾರ್ಯಾಚರಿಸುತ್ತಿದೆ.

2021ರಲ್ಲಿ ದಿವಂಗತರಾದ ಮೌಲಾನರು ಶಾಂತಿಯುತ ಸಮಾಜದ ಸಂಸ್ಥಾಪನೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದರು. ಈ ನಿಟ್ಟಿನಲ್ಲಿ ಅವರು ಪಟ್ಟ ಪರಿಶ್ರಮವನ್ನು ಭಾರತ ಸರಕಾರ ಸೇರಿದಂತೆ ಅನೇಕ ರಾಷ್ಟ್ರೀಯ ಮತ್ತು ಅಂತರ್ ರಾಷ್ಟ್ರೀಯ ಸಂಸ್ಥೆಗಳು ಗುರುತಿಸಿ, ಮೌಲಾನಾರಿಗೆ ಪ್ರಶಸ್ತಿ ನೀಡುವ ಮೂಲಕ ಅವರನ್ನು ಸನ್ಮಾನಿಸಿ ಗೌರವಿಸಿವೆ. ಅವುಗಳ ಪೈಕಿ ಭಾರತದ ನಾಗರಿಕರಿಗೆ ನೀಡಲಾಗುವ ಎರಡನೆ ಅತ್ಯುನ್ನತ ಪ್ರಶಸ್ತಿಯಾದ ಪದ್ಮ ವಿಭೂಷಣವೂ ಸೇರಿದೆ (11, ನವೆಂಬರ್ 2021).

ಮೌಲಾನರು, ಶಾಂತಿ ಮತ್ತು ಸಕರಾತ್ಮಕತೆಯ ಕಡೆಗೆ ಜನರ ಮನಸ್ಸನ್ನು ವಾಲಿಸುವ ಸಲುವಾಗಿ ದಣಿವಿಲ್ಲದೆ ದುಡಿದರು. “ಭಯೋತ್ಪಾದನೆಯು ಹಿಂಸೆಯನ್ನು ಪ್ರಚೋದಿಸುವ ಸಿದ್ಧಾಂತವಾಗಿದೆ. ಆದ್ದರಿಂದ, ನಾವು ಅದನ್ನು ಶಾಂತಿಯ ಸಿದ್ಧಾಂತದೊಂದಿಗೆ ಹಿಮ್ಮೆಟ್ಟಿಸಬೇಕಾದ ಆವಶ್ಯಕತೆ ಇದೆ” ಎಂದು ಅವರು ಸದಾ ಹೇಳುತ್ತಿದ್ದರು.

ಮೌಲಾನಾರು ಇಸ್ಲಾಮನ್ನು ಅದರ ನೈಜ ಸಿದ್ಧಾಂತದೊಂದಿಗೆ ಪ್ರಸ್ತುತಪಡಿಸಿದವರು. ಇಸ್ಲಾಮ್ “ನೈಸರ್ಗಿಕದತ್ತವಾದ ಧರ್ಮ” ಎಂಬುದು ಅವರ ಅಚಲವಾದ ವಿಶ್ವಾಸವಾಗಿತ್ತು.

ಈ ವಿಷಯದ ಕುರಿತು ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು ಈ ಕೆಳಗಿನ ಲಿಂಕನ್ನು ಬಳಸಿ:

www.cpsglobal.org
www.cpskannada.com
www.facebook.com/maulanakhan
www.spiritofislam.co.in
www.peacemission.in

“ಜಗತ್ತಿನ ಅತ್ಯಂತ ಯಶಸ್ವಿ ಜೀವನ ಯಾವುದೆಂದರೆ, ಯಾರ ಕುರಿತೂ ಅಣುಗಾತ್ರದಷ್ಟು ನಕರಾತ್ಮಕ ಭಾವನೆ ಹೊಂದದೆ ಜೀವಿಸುವುದು. ವ್ಯಕ್ತಿಯೊಬ್ಬನು ಈ ಬಾಹ್ಯ ಜಗತ್ತಿನಿಂದ ನಿರ್ಗಮಿಸುವಾಗ ಸಕರಾತ್ಮಕ ಮನಸ್ಥಿತಿಯೊಂದಿಗೆ ನಿರ್ಗಮಿಸಬೇಕು. ಇದು ನಾನು ಈ ಜಗತ್ತಿನಲ್ಲಿ ಕಂಡುಕೊಂಡ ನನ್ನ ಕೊನೆಯ ಆವಿಷ್ಕಾರವಾಗಿದೆ.”

*–ಮೌಲಾನಾ ವಹೀದುದ್ದೀನ್ ಖಾನ್ (1925–2021)*

*ಈ ಕೈಪಿಡಿಯು ಉಚಿತ ವಿತರಣೆಗಾಗಿ ಮಾತ್ರ*